I ನೇಯ ಹೆಚ್ಚುವರಿ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚಿಕ್ಕೋಡಿ

ದಿನಾಂಕ 15 ನೇ ಮಾರ್ಚ 2023

ಸಿ. ಸಿ. ನಂ. 3229-2022

ಪಿರ್ಯಾದಿ 1) ಕರ್ನಾಟಕ ಸರ್ಕಾರ

ವಿರುದ್ಧ

ಆರೋಪಿಗಳು 1) ಮಹಾದೇವ ರಾಯಪ್ಪಾ ಪೂಜಾರಿ
ವಯಸ್ಸುಃ 60 ವರ್ಷ,
ಸಾಃ ಜನವಾಡ ತಾಃಚಿಕ್ಕೋಡಿ.

2) ಶಿವರಾಮ ರಾಯಪ್ಪಾ ಪೂಜಾರಿ
ವಯಸ್ಸುಃ 58 ವರ್ಷ,
ಸಾಃ ಜನವಾಡ ತಾಃಚಿಕ್ಕೋಡಿ.

3) ದಶರಥ ಮಾಹಾದೇವ ಪೂಜಾರಿ
ವಯಸ್ಸುಃ 35 ವರ್ಷ,
ಸಾಃ ಜನವಾಡ ತಾಃಚಿಕ್ಕೋಡಿ.

4) ಕೆಂಚಪ್ಪಾ ಮಾಹಾದೇವ ಪೂಜಾರಿ
ವಯಸ್ಸುಃ 34 ವರ್ಷ,
ಸಾಃ ಜನವಾಡ ತಾಃಚಿಕ್ಕೋಡಿ.

5) ರಾಮಾ ಶಿವರಾಮ ಪೂಜಾರಿ
ವಯಸ್ಸುಃ 30 ವರ್ಷ,
ಸಾಃ ಜನವಾಡ ತಾಃಚಿಕ್ಕೋಡಿ.

6) ಲಕ್ಷ್ಮಣ ಶಿವರಾಮ ಪೂಜಾರಿ
ವಯಸ್ಸುಃ 29 ವರ್ಷ,
ಸಾಃ ಜನವಾಡ ತಾಃಚಿಕ್ಕೋಡಿ.

ದೋಷಾರೋಪಣೆ

ಅಶೋಕ. ಆರ್.ಹೆಚ್, 1 ನೇಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.. ದಂಡಾಧಿಕಾರಿಗಳು. ಚಿಕ್ಕೋಡಿ, ಆದ ನಾನು ನಿಮ್ಮ ಮೇಲೆ ದೋಷಾರೋಪಣೆಯನ್ನು ಹೊರೆಸುವುದೇನೆಂದರೇ,

15/3/23

1) ದಿನಾಂಕ 18.12.2021 ರಂದು 18.00 ಸಮಯದಲ್ಲಿ ಸದಲಗಾ ಗ್ರಾಮದ ಹದ್ದಿನ ಪಿರ್ಯಾದಿ ಸರ್ವೆ ನಂಬರ 282 ರಲ್ಲಿನ ತನ್ನ ಜಮೀನಿನಲ್ಲಿ ಪಿರ್ಯಾದಿ ಕೆಲಸ ಮಾಡುತ್ತಿದ್ದಾಗ, ಪಿರ್ಯಾದಿಗೆ ಹೊಡೆಯುವ ಸಲುವಾಗಿ ಆರೋಪಿಗಳಾದ ತಾವು ತಮ್ಮ ಸಮಾನ ಉದ್ದೇಶವನ್ನು ಈಡೇರಿಸುವ ಸಲುವಾಗಿ ಕಾನೂನು ಬಾಹಿರ ಸಂಘಟನೆಯ ಸದಸ್ಯರಾಗಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 143 ರ ಅಡಿಯಲ್ಲಿ ತಮ್ಮಗಳ ಮೇಲೆ ಆರೋಪ ಹೊರಿಸಲಾಗಿದೆ.

2) ಅದೇ ದಿನ, ಅದೇ ಸಮಯ ಹಾಗೂ ಸ್ಥಳದಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ತಾವು ತಮ್ಮ ಸಮಾನ ಉದ್ದೇಶವನ್ನು ಈಡೇರಿಸುವ ಸಲುವಾಗಿ ಕಾನೂನು ಬಾಹಿರ ಸಂಘಟನೆಯ ಸದಸ್ಯರಾಗಿ, ದೊಂಬಿ ಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 147 ರ ಅಡಿಯಲ್ಲಿ ತಮ್ಮಗಳ ಮೇಲೆ ಆರೋಪ ಹೊರಿಸಲಾಗಿದೆ.

3) ಅದೇ ದಿನ, ಅದೇ ಸಮಯ ಹಾಗೂ ಸ್ಥಳದಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ತಾವುಗಳು ತಮ್ಮ ಸಮಾನ ಉದ್ದೇಶವನ್ನು ಈಡೇರಿಸುವ ಸಲುವಾಗಿ ಕಾನೂನು ಬಾಹಿರ ಸಂಘಟನೆಯ ಸದಸ್ಯರಾಗಿ ಮಾರಣಾಂತಿಕ ಆಯುಧವಾದ ಕೊಡ್ಲಿ ಕಾವುನ್ನು ಹಿಡಿದುಕೊಂಡು ದೊಂಬಿ ಮಾಡಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 148 ರ ಅಡಿಯಲ್ಲಿ ತಮ್ಮಗಳ ಮೇಲೆ ಆರೋಪ ಹೊರಿಸಲಾಗಿದೆ.

4) ಅದೇ ದಿನ, ಅದೇ ಸಮಯ ಹಾಗೂ ಸ್ಥಳದಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ನೀವುಗಳು ಸಮಾನ ಏಕೊದ್ದೇಶದಿಂದ ಸಂಗಮತ ಮಾಡಿಕೊಂಡು ಬಂದು ಹಳೆಯ ಜಗಳದ ಸಿಟ್ಟಿನಿಂದಾ ಪಿರ್ಯಾದಿಯ ಜೊತೆ ತಂಟೆ ತೆಗೆದು ಆರೋಪಿತರಾದ ನೀವು ಪಿರ್ಯಾದಿಗೆ ಹೊಡೆದು ಸಾದಾ ಗಾಯಗಳನ್ನುಂಟುಪಡಿಸಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರಿ.

5) ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನೀವುಗಳು ಸಮಾನ ಏಕೊದ್ದೇಶದಿಂದ ಪಿರ್ಯಾದಿಯೊಂದಿಗೆ ಜಗಳ ತೆಗೆದು, 1 ಮತ್ತು 2 ನೇ ಆರೋಪಿಯಾದ ನೀವು ಪಿರ್ಯಾದಿಗೆ ಕೊಡ್ಲಿಕಾವಿಯಿಂದ ಬಲಗೈ ಹಾಗೂ ನಡುವಿಗೆ ಹೊಡೆದಿದ್ದು, ಆರೋಪಿ ನಂ-3 ರಿಂದ 6 ಆದ ನೀವು ಕಟ್ಟಿಗೆಯಿಂದ ಪಿರ್ಯಾದಿಗೆ ಹೊಡೆದಿದ್ದು, 1 ನೇ ಆರೋಪಿಯಾದ ನೀವು ಚಾಸಾ-5 ರವರಿಗೆ ಹಾಗೂ 2 ನೇ ಆರೋಪಿಯಾದ ನೀವು ಚಾಸಾ-6 ರವರಿಗೆ ಕೊಡಲಿ ಕಾವಿನಿಂದ ಹೊಡೆದು, ಆ ಮೂಲಕ ಭಾರತಿಯ ದಂಡ ಸಂಹಿತೆ ಕಲಂ 324 ಸಹ

15/3/23

ಕಲಂ 149 ರಡಿಯಲ್ಲಿ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಹೊರಿಸಲಾಗಿದೆ.

6) ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ವಿಷಯಕ್ಕೆ ಆರೋಪಿಗಳಾದ ನೀವುಗಳು ಸಮಾನ ಏಕೋದ್ದೇಶದಿಂದ ಪಿರ್ಯಾದಿಯೊಂದಿಗೆ ಜಗಳ ತೆಗೆದು, 3 ಮತ್ತು 4 ನೇ ಆರೋಪಿಯಾದ ನೀವು ಪಿರ್ಯಾದಿಯ ಮೇಲೆ ಅಪರಾಧಿಕ ಬಲ ಪ್ರಯೋಗಿಸಿ, ಆಕೆಯ ಸೀರೆ ಹಿಡಿದು ಎಳೆದು, ಸೀರೆ ಮತ್ತು ರವಿಕೆಯನ್ನು ಹರಿದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 354 ಬಿ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿರುತ್ತೀರೆಂದು ತಮ್ಮ ಮೇಲೆ ಆರೋಪ ಹೊರಿಸಲಾಗಿದೆ.

7) ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿಗಳಾದ ತಾವುಗಳು ತಮ್ಮ ಸಮಾನ ಉದ್ದೇಶವನ್ನು ಈಡೇರಿಸುವ ಸಲುವಾಗಿ ಕಾನೂನು ಬಾಹೀರ ಸಂಘಟನೆಯ ಸದಸ್ಯರಾಗಿ ನಿಮ್ಮಲ್ಲಿನ ಆರೋಪಿ ನಂ-5 ಮತ್ತು 6 ರವರು ಪಿರ್ಯಾದಿಗೆ ಅವಾಚ್ಯ ಶಬ್ದಗಳಿಂದ ಬೈದು ಶಾಂತಿ ಭಂಗವನ್ನುಂಟು ಮಾಡಿ ಅವರನ್ನು ಉದ್ರೇಕಿಸಿ ಉದ್ದೇಶಪೂರ್ವಕವಾಗಿ ಅವಮಾನ ಮಾಡಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿರುತ್ತೀರೆಂದು ತಮ್ಮ ಮೇಲೆ ಆರೋಪ ಹೊರಿಸಲಾಗಿದೆ.

8) ಅದೇ ದಿನ ಅದೇ ಸಮಯ ಹಾಗೂ ಸ್ಥಳದಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ನೀವುಗಳು ತಮ್ಮ ಸಮಾನ ತಮ್ಮ ಸಮಾನ ಉದ್ದೇಶವನ್ನು ಈಡೇರಿಸುವ ಸಲುವಾಗಿ ಕಾನೂನು ಬಾಹೀರ ಸಂಘಟನೆಯ ಸದಸ್ಯರಾಗಿ ಪಿರ್ಯಾದಿಗೆ ಜೀವ ಬೆದರಿಕೆ ಹಾಕಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿರುತ್ತೀರೆಂದು ತಮ್ಮ ಮೇಲೆ ಆರೋಪ ಹೊರಿಸಲಾಗಿದೆ.

ಸದರಿ ಮೇಲ್ಕಂಡ ದೋಷಾರೋಷಣೆಗಳು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತವೆ.

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಿ ನಂತರ ಆರೋಪಿ ನೀಡಿದ ಉತ್ತರವನ್ನು ಬರೆದುಕೊಂಡು ಸರಿಯಾಗಿದೆ ಎಂದು ದೃಡೀಕರಿಸಿದೆ)

16/3/2

(ಅಶೋಕ ಆರ್. ಹೆಚ್)
1 ನೇಯ ಹೆಚ್ಚುವರಿ ದಿವಾಣಿ ಹಾಗೂ
ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚಿಕ್ಕೋಡಿ